

ಹಸುರು ಸಿರಿಯ ಸಾಕ್ಷಿಯಲ್ಲಿ ಗತಕಾಲದ ಕಥೆ ಪಿಸುಗುಡುವ ಸಿಂಹಗಢ

ಈ ಕೋಟೆಯ ಆಕಾರ, ಅಗಾಧತೆ, ವಾಸ್ತುಶಿಲ್ಪ, ವಿನ್ಯಾಸ, ಸುತ್ತಲಿರುವ ಪರಿಸರ – ಎಲ್ಲವೂ ಮೋಹಕ. ಇಲ್ಲಿಂದ ಕಾಣಿಸುವ ಪುಣೆಯ ಖಡಾಕ್ವಾಸ್ಲಾ ಅಣೆಕಟ್ಟಿನ ಚುಂಬಕ ನೋಟ ಅಪ್ರತಿಮವಾದುದು.

## ಬಿಸಿಲು ಹರಿಯಿತು; ಕೋಟೆ ಹೊಳೆಯಿತು

ನಾವು ಕೋಟೆಯ ಆವರಣ ಪ್ರವೇಶಿಸುತ್ತಿದ್ದಂತೆ ಮಳೆ ಒಂದಷ್ಟು ನಿಂತು ಎಳೆಬಿಸಿಲು ಸುತ್ತಲಿನ ಪರ್ವತಶ್ರೇಣಿಗಳಲ್ಲಿ, ಕೋಟೆಯ ಮೆಟ್ಟಿಲುಗಳಲ್ಲಿ, ಪಾಚಿಗಟ್ಟಿದ ಕಮಾನುಗಳಲ್ಲಿ ಅಂಬೆಗಾಲಿಕ್ಕುತ್ತಾ ಏರಲು ಶುರುಮಾಡಿತು. ಕೆಲವೇ ಕ್ಷಣಗಳಲ್ಲಿ ಇಡೀ ಕೋಟೆ ಎಳೆ ಬಿಸಿಲಿನಲ್ಲಿ ಫಳಫಳ ಹೊಳೆಯತೊಡಗಿತು.

ಸಮುದ್ರಮಟ್ಟದಿಂದ ಸುಮಾರು 1312 ಮೀಟರ್ ಎತ್ತರದಲ್ಲಿರುವ ಈ ಕೋಟೆ ಕಾಣಿಸುವ ಗತಕಾಲದ ಬಿಂಬಗಳು, ತನ್ನೊಳಗೆ ಬಚ್ಚಿಟ್ಟುಕೊಂಡಿರುವ ಇತಿಹಾಸದ ಸುಂದರ ಕಥೆಗಳು, ಜೊತೆಗೆ ಕೋಟೆ ಒಳಗೊಂಡಿರುವ ಹಸಿರು, ಪಶ್ಚಿಮಘಟ್ಟದ ಅಪರೂಪದ ಸಸ್ಯ ಮತ್ತು ಪಕ್ಷಿ ವೈವಿಧ್ಯಗಳ ರಾಶಿ ಮತ್ತು ಮೌನದಿಂದಲೇ ಕಾಡಿಸುತ್ತಾ ಸೆಳೆಯುವ ಈ ಕೋಟೆಯ ನಿಗೂಢತೆ ಇವೆಲ್ಲವನ್ನೂ ಆಸ್ವಾದಿಸುತ್ತ, ಕಣ್ತುಂಬಿಕೊಳ್ಳುತ್ತ ಇದ್ದರೆ ಆಹಾ ಆ ಅನುಭವ, ಆ ಖುಷಿ, ಆ ಧನ್ಯತೆ ಎಷ್ಟು ಚೆಂದ ಅನ್ನಿಸುತ್ತದೆ.

ಕೋಟೆಯ ಕಲ್ಲುಗಳನ್ನು, ಆವರಣವನ್ನು ದಟ್ಟ ಹಸಿರಿನ ಹುಲ್ಲಿನ ಪದರ ಆವರಿಸಿರುವುದರಿಂದ ಇದು ಶೋಲಾ ಹುಲ್ಲುಗಾವಲಿನಿಂದ ಆವೃತ್ತವಾದ ಬೆಟ್ಟವೇ ಅನ್ನಿಸಿಬಿಡುತ್ತದೆ. ಸಿಂಹಗಢ ಕೋಟೆಗೆ ಸುಮಾರು 2000 ವರ್ಷಗಳಷ್ಟು ಇತಿಹಾಸವಿದೆ. ಒಂದು ಕಾಲದಲ್ಲಿ ಈ ಕೋಟೆ 'ಕೊಂಡಾಣಾ' ಅಂತಲೇ ಖ್ಯಾತಿ ಪಡೆದಿತ್ತು. ಆ ಹೆಸರಿನಲ್ಲೇ ಒಂದಷ್ಟು ಯುದ್ಧಗಳು ಈ ಕೋಟೆಯ ನೆಲದಲ್ಲೇ ನಡೆದುಹೋದವು. ಇಲ್ಲಿನ ಕಲ್ಲುಗಳ ಮೇಲಿರುವ ಕೆಲವೊಂದು ಕೆತ್ತನೆಗಳು, ಅವುಗಳ ವಾಸ್ತು, ಆಕಾರ, ಸೊಗಡು ನೋಡಿದರೆ ಈ ಕೋಟೆಯ ಪ್ರಾಚೀನತೆ ಅರಿವಿಗೆ ಬರುತ್ತದೆ. 14ನೇ ಶತಮಾನದ ಆದಿಯಲ್ಲಿ ಈ ಕೋಟೆಯನ್ನು ಕೋಲಿ ರಾಜ ನಾಗ ನಾಯಿಕ್ ಎನ್ನುವವನು ಆಳುತ್ತಿದ್ದನಂತೆ. 1328ರಲ್ಲಿ ಈ ಕೋಟೆಯನ್ನು ಮಹಮ್ಮದ್ ಬಿನ್ ತುಘಲಕ್ ವಶಪಡಿಸಿಕೊಂಡನಂತೆ. ನಂತರದ ವರ್ಷಗಳಲ್ಲಿ, ಅವನ ಬಳಿಕ ಆದಿಲ್ ಷಾ, ಷಹಾಜಿ ಬೋಸ್ಲೆ ಅವರು ಕೋಟೆಯ ಆಡಳಿತವನ್ನು ಮುನ್ನಡೆಸಿದರು. ಕ್ರಮೇಣ ಈ ಕೋಟೆಯ ಮೇಲೆ ಪ್ರಾಬಲ್ಯ ಸಾಧಿಸಿದ ಮರಾಠರು, ಸ್ವರಾಜ್ಯ ಎನ್ನುವಂತಹ ಪರಿಕಲ್ಪನೆಯನ್ನು ಕಂಡುಕೊಂಡರು.

1657ರಲ್ಲಿ ಆದಿಲ್ ಷಾನ ಮರಣಾನಂತರದಲ್ಲಿ ಶಿವಾಜಿ ಮಹಾರಾಜ ಸ್ವರಾಜ್ಯ ಘೋಷಿಸಿದ ಮತ್ತು ಕೋಟೆಯನ್ನು ತನ್ನದಾಗಿಸಿಕೊಂಡ. 1662–1665ರವರೆಗೆ ಮೊಗಲರು ಮರಾಠರ ಬೆನ್ನುಬಿಡದೆ ಕೋಟೆಯನ್ನು ವಶಪಡಿಸಿಕೊಳ್ಳಲು ಹವಣಿಸುತ್ತಲೇ ಇದ್ದರು. 1665ರಲ್ಲಿ ಶಿವಾಜಿ ಮಹಾರಾಜ ಮತ್ತು ಒಂದನೇ ಜೈ ಸಿಂಗ್ ನಡುವೆ 'ಪುರಂದರ ಒಪ್ಪಂದ'ವಾಗಿ ಕೋಟೆ ಜೈ ಸಿಂಗ್‌ಗೆ ಸೇರಿತು. 1689ರಲ್ಲಿ ಶಿವಾಜಿ ಮತ್ತೆ ಈ ಕೋಟೆಯನ್ನು ಪಡೆಯುವಲ್ಲಿ ಯಶಸ್ವಿಯಾದರಂತೆ. ಈ ಕೋಟೆ ಮತ್ತೆ ಮೊಗಲರ ವಶವಾಗಿ, 1693ರ ಹೊತ್ತಿಗೆ ಮರಾಠರು ಮತ್ತೆ ಈ ಕೋಟೆಯನ್ನು ಗೆದ್ದುಕೊಂಡರಂತೆ. 1703ರಲ್ಲಿ ಔರಂಗಾಜೇಬ ಈ ಕೋಟೆಯನ್ನು ವಶಪಡಿಸಿಕೊಂಡನಂತೆ. ಬಳಿಕ ಅವನಿಂದ ಕೋಟೆ ಮತ್ತೆ ಮರಾಠರ ವಶವಾಯಿತು. ಶಿವಾಜಿಯ ಅಪ್ರತಿಮ ಸೇನಾನಿ ತಾನಾಜಿ ಒಂಟಿಯಾಗಿ ಈ ಕೋಟೆಯಲ್ಲಿ ಯುದ್ಧ ಮಾಡಿ, ಕೋಟೆ ಮತ್ತು ಮರಾಠರ ವಶವಾಗುವಂತೆ ಮಾಡಿ ಸತ್ತನಂತೆ.

ಈ ವಿಷಯ ತಿಳಿದು, 'ಗಡಾ ಅಲಾ ಪನ್ ಸಿಂಹ್ ಗೆಲಾ' (ಕೋಟೆ ಗೆದ್ದೆವು, ಆದರೆ ಸಿಂಹನನ್ನು ಕಳೆದುಕೊಂಡೆವು) ಎಂದು ಶಿವಾಜಿ ಬೇಸರದಿಂದ ಉದ್ಗರಿಸಿದನಂತೆ. ಆ ಘಟನೆಯ ಬಳಿಕ ಈ ಕೋಟೆಗೆ 'ಸಿಂಹಗಢ' ಎಂದು ಮರು ನಾಮಕರಣ ಮಾಡಲಾಯಿತು ಎಂದು ಇತಿಹಾಸ ಹೇಳುತ್ತದೆ.

ತಾನಾಜಿಯ ಸಮಾಧಿಯೂ ಕೋಟೆಯೊಳಗಿದೆ. ಇತಿಹಾಸದ ಕಥೆಗಳನ್ನು ನಮ್ಮ ಮನಸ್ಸಲ್ಲಿ ಇನ್ನಷ್ಟು ಬೆಳೆಸುತ್ತಾ, ಕಲ್ಪಿಸಿಕೊಳ್ಳುತ್ತ ಸಾಗಿದರೆ ತಾನಾಜಿಯೂ, ಆತನ ಪರಾಕ್ರಮವೂ ನೆನಪಾಗಿ ಈ ಕೋಟೆ ಆ ಕಾಲದಲ್ಲಿ ಅದೆಷ್ಟು ಭವ್ಯವಾಗಿರಬಹುದು ಎನ್ನುವ ಅಚ್ಚರಿಯೂ ಆಗುತ್ತದೆ. ಇದೇ ತಾನಾಜಿ ಕುರಿತಾದ, ಅಜಯ್ ದೇವಗನ್ ಅಭಿನಯದ 'ತಾನಾಜಿ' ಸಿನಿಮಾ ಸಿಂಹಗಢದ ಕೋಟೆಯಲ್ಲೇ ಚಿತ್ರೀಕರಣಗೊಂಡಿದೆ. ಐತಿಹಾಸಿಕ ಕೋಟೆ ಬೆಳ್ಳಿಪರದೆಯಲ್ಲೂ ಬಂದ ನಂತರ ಹೇಳಬೇಕೇ? ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ದಂಡು ಇದೀಗ ಜಾಸ್ತಿಯಾಗುತ್ತಿದೆ.

## ಮಳೆ, ಚಳಿಯ ಸ್ವರ್ಗ

ಸಿಂಹಗಢ ಕೋಟೆಗೆ ಎರಡು ದೊಡ್ಡ



ಪರಿಸರವೇ ಕೊರೆದಂತೆ ಕಾಣಿಸುವ ಆಕರ್ಷಕ ಮೆಟ್ಟಿಲುಗಳು